# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **1381** |
| ಸದಸ್ಯರ ಹೆಸರು | : | ಶ್ರೀ ಸುನೀಲ್ ವಲ್ಯಾಪುರ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 16-03-2026 |
| ಉತ್ತರಿಸುವ ಸಚಿವರು | | ಮಾನ್ಯ ಇಂಧನ ಸಚಿವರು |

****

| | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ರೈತರಿಗೆ 3 ಫೇಸ್ ವಿದ್ಯುತ್ ದಿನದ ಎಲ್ಲಾ ಗಂಟೆಗಳು ನೀಡಲಾಗುತ್ತಿದೆ: (ಜಿಲ್ಲಾವಾರು ಮಾಹಿತಿ ನೀಡುವುದು) | ರಾಜ್ಯದಲ್ಲಿ ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ರೈತರ ಪಂಪ್ ಸೆಟ್ ಗಳಿಗೆ ದಿನವಹಿ 7 ಗಂಟೆಗಳ ಕಾಲ 3 ಫೇಸ್ ವಿದ್ಯುತ್ ಸರಬರಾಜು ನೀಡಲಾಗುತ್ತಿದೆ. |
| ಆ) | ಕಲ್ಯಾಣ ಕರ್ನಾಟಕ ಮತ್ತು ಉತ್ತರ ಕರ್ನಾಟಕ ರೈತರಿಗೆ ಸರ್ಕಾರದಿಂದ ಒಂದು ಟಿ.ಸಿ ಓಲ್ಟೇಜ್ ಹೆಚ್ಚಿಸಲು ಮತ್ತು ನೂತನ ಟಿ.ಸಿ ಅಳವಡಿಸಲು ಸರ್ಕಾರ ನಿಗಧಿಪಡಿಸಿರುವ ಹಣ ಎಷ್ಟು: (ಜಿಲ್ಲಾವಾರು ಮಾಹಿತಿ ನೀಡುವುದು) | ಕಲ್ಯಾಣ ಕರ್ನಾಟಕ ಮತ್ತು ಉತ್ತರ ಕರ್ನಾಟಕ ರೈತರ ನೀರಾವರಿ ಪಂಪ್‌ಸೆಟ್‌ಗಳಿಗೆ ಗುಣಮಟ್ಟದ ವಿದ್ಯುತ್ ಪೂರೈಸಲಾಗುತ್ತಿದೆ. ಒಂದು ವೇಳೆ ವೋಲ್ಟೇಜ್ ಸಮಸ್ಯೆ ಅಥವಾ ಹೆಚ್ಚುವರಿ ಪರಿವರ್ತಕದ ಅವಶ್ಯಕತೆ ಕಂಡು ಬಂದಲ್ಲಿ, ತಾಂತ್ರಿಕವಾಗಿ ಪರಿಶೀಲಿಸಿ, ಅವಶ್ಯವಿದ್ದಲ್ಲಿ ವಿದ್ಯುತ್ ಸರಬರಾಜು ಕಂಪನಿ ವತಿಯಿಂದಲೇ ಹೆಚ್ಚುವರಿ ಪರಿವರ್ತಕ ಅಳವಡಿಸಲಾಗುತ್ತಿದೆ. ಇದಕ್ಕಾಗಿ ರೈತರು / ಗ್ರಾಹಕರಿಂದ ಯಾವುದೇ ರೀತಿಯ ಶುಲ್ಕ/ಹಣ ಪಡೆಯಲಾಗುವುದಿಲ್ಲ. |
| ಇ) | ಕಲ್ಯಾಣ ಕರ್ನಾಟಕದ ಎಷ್ಟು ರೈತರಿಗೆ ಉಚಿತ ವಿದ್ಯುತ್ ನೀಡಲಾಗಿದೆ: ಮತ್ತು ಎಷ್ಟು ಹೆಚ್.ಪಿ ಪಂಪ್‌ಸೆಟ್ ಅಳವಡಿಸಿದವರಿಗೆ ನೀಡಲಾಗುತ್ತಿದೆ: ರಾಜ್ಯದ ಎಲ್ಲಾ ರೈತರಿಗೆ ಎಲ್ಲಾ ಹೆಚ್.ಪಿ ಕೃಷಿ ಜಮೀನಿಗೆ ಬಳಸುವವರಿಗೆ ಉಚಿತವಾಗಿ ವಿದ್ಯುತ್ ನೀಡುವ ಬಗ್ಗೆ ಸರ್ಕಾರ ಚಿಂತಿಸಿದೆಯೇ: | ಕಲ್ಯಾಣ ಕರ್ನಾಟಕ ವ್ಯಾಪ್ತಿಯಲ್ಲಿ 10 ಹೆಚ್.ಪಿ. ವರೆಗಿನ 4.54 ಲಕ್ಷ ನೀರಾವರಿ ಪಂಪ್ ಸೆಟ್ ಸ್ಥಾವರಗಳಿಗೆ ಉಚಿತ ವಿದ್ಯುತ್ ನೀಡಲಾಗುತ್ತಿದೆ.<br><br>ರಾಜ್ಯದ ಎಲ್ಲಾ ಹೆಚ್.ಪಿ. ನೀರಾವರಿ ವಿದ್ಯುತ್ ಸ್ಥಾವರಗಳಿಗೆ ಉಚಿತ ವಿದ್ಯುತ್ ನೀಡುವ ಪ್ರಸ್ತಾವನೆ ಪ್ರಸ್ತುತ ಸರ್ಕಾರದ ಹಂತದಲ್ಲಿ ಇರುವುದಿಲ್ಲ. |
| ಈ) | ರಾಜ್ಯದಲ್ಲಿ ಎಷ್ಟು ಕಡೆ ಇ.ವಿ ವಾಹನ ಚಾರ್ಜಿಂಗ್ ಪಾಯಿಂಟ್‌ಗಳನ್ನು ನೀಡಲಾಗಿದೆ: ಅದಕ್ಕೆ ಬಳಕೆಯಾಗುತ್ತಿರುವ ವಿದ್ಯುತ್ ಎಷ್ಟು? (ನಿಗಮವಾರು ಜಿಲ್ಲಾವಾರು ಮಾಹಿತಿ ನೀಡುವುದು) | ರಾಜ್ಯದಲ್ಲಿ ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯಲ್ಲಿ ಅಳವಡಿಸಲಾದ ಇ.ವಿ ವಾಹನ ಚಾರ್ಜಿಂಗ್ ಪಾಯಿಂಟ್‌ಗಳು ಹಾಗೂ ಅದಕ್ಕೆ ಬಳಕೆಯಾಗುತ್ತಿರುವ ವಿದ್ಯುತ್ ವಿವರಗಳನ್ನು **ಅನುಬಂಧ**ದಲ್ಲಿ ಒದಗಿಸಲಾಗಿದೆ. |

ಸಂಖ್ಯೆ: ಎನರ್ಜಿ 66 ಇಬಿಎಸ್ 2026

(ಕೆ.ಜೆ.ಜಾರ್ಜ್)
ಇಂಧನ ಸಚಿವರು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಸುನೀಲ್‌ವಲ್ಯಾಪುರ್ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ1381ಕ್ಕೆ ಅನುಬಂಧ**

**ಬೆಸ್ಕಾಂ:**

| ಕ್ರ ಸಂ | ಆರ್ಥಿಕ ವರ್ಷ 2025-26 (ಏಪ್ರಿಲ್-2025 ರಿಂದ ಜನವರಿ-2026 ರ ಮಾಹೆಯ ವರೆಗಿನ ವಿವರ) | | |
|---|---|---|---|
| | ಜಿಲ್ಲೆ | ಇ.ವಿ ವಾಹನ ಚಾರ್ಜಿಂಗ್ ಪಾಯಿಂಟ್ ಸಂಖ್ಯೆ | ಬಳಕೆ ಮಿ. ಯೂನಿಟ್ ಗಳಲ್ಲಿ |
| 1 | ಬೆಂಗಳೂರು ಗ್ರಾಮಾಂತರ | 175 | 16.98 |
| 2 | ಬೆಂಗಳೂರು ನಗರ | 1279 | 144.58 |
| 3 | ಚಿಕ್ಕಬಳ್ಳಾಪುರ | 44 | 0.28 |
| 4 | ಚಿತ್ರದುರ್ಗ | 28 | 0.45 |
| 5 | ದಾವಣಗೆರೆ | 31 | 1.44 |
| 6 | ಕೋಲಾರ | 42 | 0.32 |
| 7 | ರಾಮನಗರ | 70 | 3.64 |
| 8 | ತುಮಕೂರು | 115 | 0.90 |
| | ಒಟ್ಟು | 1784 | 168.59 |

**ಸೆಸ್ಕ್:**

| ಕ್ರ ಸಂ | ಆರ್ಥಿಕ ವರ್ಷ 2025-26 (ಏಪ್ರಿಲ್-2025 ರಿಂದ ಜನವರಿ-2026 ರ ಮಾಹೆಯ ವರೆಗಿನ ವಿವರ) | | |
|---|---|---|---|
| | ಜಿಲ್ಲೆ | ಇ.ವಿ ವಾಹನ ಚಾರ್ಜಿಂಗ್ ಪಾಯಿಂಟ್ ಸಂಖ್ಯೆ | ಬಳಕೆ ಮಿ. ಯೂನಿಟ್ ಗಳಲ್ಲಿ |
| 1 | ಮೈಸೂರು | 100 | 1.90 |
| 2 | ಚಾಮರಾಜನಗರ | 16 | 0.07 |
| 3 | ಕೊಡಗು | 23 | 1.22 |
| 4 | ಮಂಡ್ಯ | 28 | 0.17 |
| 5 | ಹಾಸನ | 36 | 0.42 |
| | ಒಟ್ಟು | 203 | 3.78 |

**ಮೆಸ್ಕಾಂ:**

| ಕ್ರ ಸಂ | ಆರ್ಥಿಕ ವರ್ಷ 2025-26 (ಏಪ್ರಿಲ್-2025 ರಿಂದ ಜನವರಿ-2026 ರ ಮಾಹೆಯ ವರೆಗಿನ ವಿವರ) | | |
|---|---|---|---|
| | ಜಿಲ್ಲೆ | ಇ.ವಿ ವಾಹನ ಚಾರ್ಜಿಂಗ್ ಪಾಯಿಂಟ್ ಸಂಖ್ಯೆ | ಬಳಕೆ ಮಿ. ಯೂನಿಟ್ ಗಳಲ್ಲಿ |
| 1 | ದಕ್ಷಿಣ ಕನ್ನಡ | 654 | 1.28 |
| 2 | ಉಡುಪಿ | 188 | 0.41 |
| 3 | ಶಿವಮೊಗ್ಗ | 47 | 0.25 |
| 4 | ಚಿಕ್ಕಮಗಳೂರು | 39 | 0.62 |
| | ಒಟ್ಟು | 928 | 2.56 |

**ಜೆಸ್ಕಾಂ:**

| ಆರ್ಥಿಕ ವರ್ಷ 2025-26 (ಏಪ್ರಿಲ್-2025 ರಿಂದ ಜನವರಿ-2026 ರ ಮಾಹೆಯ ವರೆಗಿನ ವಿವರ) | | | |
|---|---|---|---|
| ಕ್ರ ಸಂ | ಜಿಲ್ಲೆ | ಇ.ವಿ ವಾಹನ ಚಾರ್ಜಿಂಗ್ ಪಾಯಿಂಟ್ ಸಂಖ್ಯೆ | ಬಳಕೆ ಮಿ. ಯೂನಿಟ್ ಗಳಲ್ಲಿ |
| 1 | ಕಲಬುರಗಿ | 02 | 0.03 |
| 2 | ಯಾದಗಿರಿ | 01 | 0.01 |
| 3 | ಬೀದರ್ | 09 | 0.13 |
| 4 | ರಾಯಚೂರ್ | 01 | 0.06 |
| 5 | ಕೊಪ್ಪಳ | 02 | 0.01 |
| 6 | ಬಳ್ಳಾರಿ | 02 | 0.01 |
| 7 | ವಿಜಯನಗರ | 06 | 0.09 |
| ಒಟ್ಟು | | 23 | 0.34 |

**ಹೆಸ್ಕಾಂ:**

| ಆರ್ಥಿಕ ವರ್ಷ 2025-26 (ಏಪ್ರಿಲ್-2025 ರಿಂದ ಜನವರಿ-2026 ರ ಮಾಹೆಯ ವರೆಗಿನ ವಿವರ) | | | |
|---|---|---|---|
| ಕ್ರ. ಸಂ | ಜಿಲ್ಲೆ | ಇ.ವಿ ವಾಹನ ಚಾರ್ಜಿಂಗ್ ಪಾಯಿಂಟ್ ಸಂಖ್ಯೆ | ಬಳಕೆ ಮಿ. ಯೂನಿಟ್ ಗಳಲ್ಲಿ |
| 1 | ಧಾರವಾಡ | 45 | 0.36 |
| 2 | ಗದಗ | 11 | 0.01 |
| 3 | ಹಾವೇರಿ | 20 | 0.24 |
| 4 | ಉತ್ತರ ಕನ್ನಡ | 20 | 0.16 |
| 5 | ಬೆಳಗಾವಿ | 73 | 0.54 |
| 6 | ಬಾಗಲಕೋಟ | 35 | 0.10 |
| 7 | ವಿಜಯಪುರ | 36 | 0.03 |
| ಒಟ್ಟು | | 240 | 1.46 |